ರೆವೆನ್ಯೂ ನಿವೇಶನದಾರರಿಗೆ ವಿದ್ಯುತ್ ಸಂಪರ್ಕ ನಿಲ್ಲಿಸಿರುವುದು

362 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) - ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರೆವೆನ್ಯೂ ನಿವೇಶನದಾರರಿಗೆ ಕಳೆದ ಆರು ತಿಂಗಳುಗಳಿಂದ ವಿದ್ಯುತ್ ಸಂಪರ್ಕ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ಪಟ್ಟಣ: ನಗರಗಳ ಯೋಜಿತ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಅನಧಿಕೃತ ಕಟ್ಟಡಗಳ ನಿರ್ಮಾಣವನ್ನು ತಡೆಗಟ್ಟುವ ಸಲುವಾಗಿ ರಾಜ್ಯಸರ್ಕಾರದ ಸಚಿವ ಸಂಪುಟದ ತೀರ್ಮಾನದಂತೆ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿದ ಇತರ ರೆವಿನ್ಯೂ ನಿವೇಶನಗಳಲ್ಲಿ ನಿರ್ಮಾಣಗೊಂಡಿರುವ ಮನೆಗಳಿಗೆ ಸಂಬಂಧಪಟ್ಟ ರೆವಿನ್ಯೂ ತಹಶೀಲ್ದಾರರು ನೀಡುವ ಅನಾಪೇಕ್ಷಣಾ ಪತ್ರದ ಮೇರೆಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಮಂಡಳಿಯು ಕ್ರಮ ಕೈಗೊಂಡಿದೆ.

ರೇಷ್ಮೆ ಮಾರಾಟ ಮಹಾ ಮಂಡಳಿ

1104 - ಶ್ರೀ ಸಿ. ಎಂ. ಲಿಂಗಪ್ಪ(ರಾಮನಗರ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ಸರ್ಕಾರ ರೇಷ್ಮೆ ಮಾರಾಟ ಮಹಾ ಮಂಡಳಿಯು ಅಸ್ತಿತ್ವದಲ್ಲಿರುವುದು ಸರ್ಕಾರಕ್ಕೆ ಗೊತ್ತಿದೆಯೇ?*

ಆ) *ರೇಷ್ಮೆ ನೂಲಿನ ವ್ಯವಹಾರದಲ್ಲಿ ಈ ಮಹಾಮಂಡಳಿಯು ಪ್ರಮುಖ ಪಾತ್ರ ವಹಿಸಿ ರೇಷ್ಮೆ ನೂಲಿನ ಉತ್ಪಾದಕರಿಗೆ ಸಹಕಾರಿ ಆಗಿದ್ದುದು ನಿಜವೇ?*

ಇ) *ರೇಷ್ಮೆ ಕೃಷಿ ಮಾರುಕಟ್ಟೆ ಮತ್ತು ಉದ್ಯಮ ಸಾಕಷು ಪ್ರಗತಿಯಾಗಿರುವಾಗ ಈ ಮಹಾ ಮಂಡಳಿಯನ್ನು ಪುನಶ್ಚೇತನಗೊಳಿಸಲು ಸರ್ಕಾರ ತೀವ್ರ ಗಮನ ಹರಿಸುವುದೇ?*

ಶ್ರೀ ವಿ. ಮುನಿಯಪ್ಪ (ರೇಷ್ಮೆ ಖಾತೆ ರಾಜ್ಯ ಸಚಿವರು):

ಅ) ಗೊತ್ತಿದೆ.

ಆ) ಹೌದು.

ಇ) ಮಹಾ ಮಂಡಳಿಯ ಲಿಕ್ವಿಡೇಷನ್ ಬಗ್ಗೆ ಗೌರವಾನ್ವಿತ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಕೆನರಾ ಬ್ಯಾಂಕಿನವರು ಸಾಲ ಬಾಕಿಗಾಗಿ ಸಿವಿಲ್ ನ್ಯಾಯಾಲಯದಲ್ಲಿ ಸರ್ಕಾರ ಕೆ.ಎಸ್.ಎಂ.ಬಿ.ಯನ್ನು ನವೆಂಬರ್-1979ರಲ್ಲಿ ರೇಷ್ಮೆ ಬೆಲೆ ಸ್ಥಿರೀಕರಣಕ್ಕೆ ಸ್ಥಾಪಿಸಿರುತ್ತದೆ.

ವಿವಿಧ ಉದ್ದೇಶಗಳಿಗೆ ಬೇಕಾಗಿರುವ ವಿದ್ಯುತ್‌ಚಕ್ತಿ ಪ್ರಮಾಣ

1117 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಗ್ರಾಹಕರು ಮತ್ತು ಕೈಗಾರಿಕೆ, ಕೃಷಿ ಉದ್ದೇಶಗಳಿಗಾಗಿ ಬೇಕಾಗಿರುವ ವಿದ್ಯುತ್ತಿನ ಪ್ರಮಾಣವೆಷು?*

ಆ) *ರಾಜ್ಯದ ವಿವಿಧ ಯೋಜನೆಗಳಿಂದ ಮತ್ತು ಕೇಂದ್ರ ಯೋಜನೆಗಳಿಂದ ಈಗ ಸರಬರಾಜು ಆಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷು?*

ಇ) *ವಿದ್ಯುತ್ ಕೊರತೆಯನ್ನು ನೀಗಲು ಸರ್ಕಾರದ ಮುಂದಿರುವ ತಾತ್ಕಾಲಿಕ ಹಾಗೂ ಖಾಯಂ ಕಾರ್ಯಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು);

ಅ) ರಾಜ್ಯದಲ್ಲಿ 1990-91ನೇ ಸಾಲಿನಲ್ಲಿ ವಿವಿಧ ವರ್ಗದ ಗ್ರಾಹಕರುಗಳಿಂದ ಬೇಕಾಗಿರುವ ಅನಿರ್ಬಂಧಿತ ವಿದ್ಯುತ್ತಿನ ಪ್ರಮಾಣದ ಅಂದಾಜು ಈ ಕೆಳಕಂಡಂತೆ ದಿನಪ್ರತಿ 56 ದಶಲಕ್ಷ ಯೂನಿಟುಗಳು.

1) ಕೈಗಾರಿಕೆಗಳು- ಸರಾಸರಿ ದಿನಂಪ್ರತಿ 26 ದಶಲಕ್ಷ ಯೂನಿಟ್‌ಗಳು.

2) ಕೃಷಿ ಬಳಕೆದಾರರು-ಸರಾಸರಿ ದಿನಂಪ್ರತಿ -15 ಲಕ್ಷ ಯೂನಿಟ್‌ಗಳು.

3) ಮಿಕ್ಕ ಉಳಿದ ವರ್ಗದ ಗ್ರಾಹಕರುಗಳಿಂದ -ಸರಾಸರಿ ದಿನಂಪ್ರತಿ -15 ದಶಲಕ್ಷ ಯೂನಿಟ್‌ಗಳು.

ಆ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿನ ವಿವಿಧ ಯೋಜನೆಗಳಿಂದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳಿಂದ ಸರಬರಾಜಾಗುತ್ತಿರುವ ವಿದ್ಯುತ್ತಿನ ಪ್ರಮಾಣ ಸರಾಸರಿ ದಿನಂಪ್ರತಿ 46 ದಶಲಕ್ಷ ಯೂನಿಟುಗಳು.

ಇ) ಕರ್ನಾಟಕ ವಿದ್ಯುತ್ ನಿಗಮವು ಈಗಾಗಲೇ ಕಾರ್ಯಗತವಾಗಿರುವ 6 ಯೋಜನೆಗಳಲ್ಲದೆ 8ನೇ ಯೋಜನೆಯ ಅವಧಿಯಲ್ಲಿ ಇನ್ನೂ 6 ಯೋಜನೆಗಳನ್ನು ಕೈಗೆತ್ತಿಗೊಳ್ಳಲು ಯೋಜಿಸಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಲಹಂಕದಲ್ಲಿ ಒಂದು ಡೀಜಲ್ ಜನರೇಟರ್ ಕೇಂದ್ರವನ್ನು ಸ್ಥಾಪಿಸಿದೆ.

ಭಾರತ ಸಂದರ್ಶನ ವರ್ಷದಲ್ಲಿ ಕರ್ನಾಟಕ ರಾಜ್ಯ ಕೈಗೊಳ್ಳಲಿರುವ ವಿಶೇಷ ಪ್ರವಾಸೋದ್ಯಮ ಕಾರ್ಯಕ್ರಮ

1116 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) - ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1991ರ ಭಾರತ ಸಂದರ್ಶನ ವರ್ಷದಲ್ಲಿ ಕರ್ನಾಟಕ ರಾಜ್ಯ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ವಿಶೇಷ ಪ್ರವಾಸೋದ್ಯಮ ಉತ್ತೇಜಕ ಕಾರ್ಯಕ್ರಮಗಳೇನು?*

ಆ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

1. ಈಗಾಗಲೇ ಕೈಗೊಂಡಿರುವ ಹೆದ್ದಾರಿ ಸೌಲಭ್ಯಗಳು ಮತ್ತಿತರ ವಸತಿ ಸೌಕರ್ಯ ಕಟ್ಟಡಗಳನ್ನು ಸಜ್ಜುಗೊಳಿಸಲಾಗುವುದು.

2. ಮೈಸೂರು ದಸರಾ, ಹಂಪಿ ಮತ್ತು ಬಿಜಾಪುರದಲ್ಲಿ ಸಾಂಸ್ಕೃತಿಕ ಉತ್ಸವವನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಗೂ ಹೊಸದಾಗಿ ಕರಾವಳಿಯಲ್ಲಿ ಕರಾವಳಿಯ ಉತ್ಸವ ಆಚರಿಸುವುದು.

3. ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯವನ್ನು ತ್ವರಿತಗೊಳಿಸಲಾಗುವುದು.

4. ನಿಯೋಜಿತ ಪ್ರವಾಸಿಗರಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು 5 ಹೊಸ ಬಸ್ಸುಗಳನ್ನು ಖರೀದಿಸಿ ಆ ಅವಧಿಯಲ್ಲಿ ಪ್ರವಾಸಿಗರಿಗಾಗಿ ಉಪಯೋಗಿಸುವುದು.

ಆ) ಕರಾವಳಿ ತೀರದ ಬಗ್ಗೆ ವಿಡಿಯೋ ಫಿಲಂ ಒಂದನ್ನು ಪ್ರವಾಸೋದ್ಯಮ ಇಲಾಖೆಯು ತಯಾರಿಸುತ್ತಿದೆ.